ಹೆಣ್ಣು ಗಂಡು ಪರಸ್ಪರ ಕೈ ಹಿಡಿದು ಈ ವೃತ್ತದೊಳಗೆ ಹೆಜ್ಜೆ ಇಡುತ್ತಾರೆ. ಮತ್ತೊಂದು ಜೋಡಿಯೂ ಅಲ್ಲೇ ಸುತ್ತು ಹೊಡೆಯುತ್ತದೆ. ಅಪರಿಚಿತ ಜೋಡಿಗಳು ಎದುರು ಸಿಕ್ಕಾಗ ಪರಸ್ಪರ ನಗುತ್ತಾರೆ. ವಿಚಾರಿಸಲಾಗಿ, ಇವರೆಲ್ಲ ಮಕ್ಕಳ ಹರಕೆ ಹೊತ್ತು ಬಂದವರು. ವೃತ್ತದೊಳಗೆ ನಾಲ್ಕಾರು ಸುತ್ತು ಬಂದು ಗುಡಿಯ ಮುಂದೆ ಗಂಧದಕಡ್ಡಿ ಕರ್ಪೂರ ಬೆಳಗಿ ಆಮೇಲೆ ಮುಂದೆ ಅಂಬಾ ಭವಾನಿಯ ಗುಡಿಯ ಕಡೆಗೆ ಕಾಲುದಾರಿಯಲ್ಲಿ ತಮ್ಮ ಪಾಡಿಗೆ ತಾವು ಅರಣ್ಯ ಪ್ರವೇಶ ಮಾಡುತ್ತಾರೆ. ಆದರೆ, ಅವೆಲಾನ್ ಪಾರ್ಕಿನ ವೃತ್ತದಲ್ಲಿ ಅಂಥ ಸಂಪ್ರದಾಯ ಇತ್ತೋ ಇರಲಿಲ್ಲವೋ ಗೊತ್ತಾಗಲಿಲ್ಲ.

★★★

ನಾವು ಅವೆಲಾನ್ ಪಾರ್ಕ್ ಬಿಟ್ಟು ಇತ್ತ ಬಂದು ಪೂರ್ವ ದಿಕ್ಕಿಗೆ ಅಟ್ಲಾಂಟಿಕ್ ಸಾಗರದ ಹಿನ್ನೀರಿನ ಪಕ್ಕದ ರಸ್ತೆಯಲ್ಲೇ ನಡೆದುಕೊಂಡು ಹೋದೆವು. ಅಲ್ಲೇ ಬಲ ಬದಿಗಿದ್ದ ಗುಡ್ಡದ ಮೇಲೆ ಒಂದು ರೆಸಾರ್ಟ್ ಮಾದರಿ ಹೋಟೆಲು ಇತ್ತು. ಅದರ ಹೆಸರು 'ಶ್ರೀವಿಲೇಜ್ ಇನ್'. ಅಲ್ಲಿಯೂ ಜನಸಂದಣಿ ಇರಲಿಲ್ಲ. ಅಥವಾ ಇದ್ದರೂ ಹೋಟೆಲಿನ ಅವರವರ ಕೋಣೆಯಲ್ಲಿ ವಿರಾಮದಲ್ಲಿದ್ದರೋ ಇಲ್ಲ ಕಿಟಕಿಯ ಹಿಂದಿನ ಆರಾಮ ಆಸನಗಳಲ್ಲಿ ಕುಳಿತು ಎದುರಿಗೆ ಅಟ್ಲಾಂಟಿಕ್ ಸಾಗರದ ಹಿನ್ನೀರು ಸುತ್ತಣ ಅರಣ್ಯ ಪ್ರಕೃತಿಯನ್ನು ನೋಡುತ್ತಿದ್ದರೋ ಏನೋ? ಒಮ್ಮೆ ಈ ರೆಸಾರ್ಟ್‌ನಲ್ಲಿ ಅಬ್ರಹಾಂ ಲಿಂಕನ್ ಉಳಿದುಕೊಂಡಿದ್ದನೆಂದರು ಶ್ರೀಧರ್. ಅನೇಕ ಕವಿ, ಕಥೆಗಾರರು, ಕಾದಂಬರಿಕಾರರು, ನಾಟಕಕಾರರು ಬಂದು ಇಲ್ಲಿ ಉಳಿದುಕೊಂಡು, ತಾವು ಬರೆಯಬೇಕಾದ ಬರೆಹಗಳನ್ನು ಬರೆದೋ, ಬರೆದದ್ದನ್ನು ಪ್ರತಿ ಮಾಡಿ ಪೂರ್ಣ ಮಾಡಿಕೊಂಡೋ ಹೋಗುತ್ತಾರೆಂದರು. ನನಗೆ ಅಲ್ಲಿ ನೆನಪಾದುದೆಂದರೆ ಯಿದ್ದಿಷ್ ಭಾಷೆಯ ಪೋಲೆಂಡ್‌ನ ನೊಬೆಲ್ ಪ್ರಶಸ್ತಿ ವಿಜೇತ ಲೇಖಕ ಐಸಾಕ್ ಬಾಸೆವಿಶ್ ಸಿಂಗರ್‌ನ ಕೆಲವು ಕಥನ ವರ್ಣನೆಗಳಲ್ಲಿ ಈ ಜಾಗವನ್ನು ಕುರಿತು ಪ್ರಸ್ತಾಪಿಸಿದ್ದು. ಅವನು ನ್ಯೂಯಾರ್ಕ್‌ನ ಪಟ್ಟಣದಲ್ಲೇ ಇದ್ದವನಾದುದರಿಂದ ಇದೇ ಜಾಗದಲ್ಲಿ ತಿರುಗಾಡಿದ ವಿವರಗಳೂ ಬರುತ್ತವೆ. ಅಮೆರಿಕದಲ್ಲಿ ಬಂದು ನೆಲೆಸಿದ್ದರೂ ತಾನು ಹುಟ್ಟಿದ ನೆಲ, ಅಲ್ಲಿಯ ಸಾಮಾಜಿಕ ನಡವಳಿಕೆ, ಧಾರ್ಮಿಕ ಸಂಗತಿಗಳನ್ನೇ ಅವಲಂಬಿಸಿ ಬರೆದದ್ದು ಮಾತ್ರವಲ್ಲದೆ ಸಿಂಗರನ ಯಾವುದೇ ಕಥೆಯನ್ನು ಯಾವ ದೇಶದವರೇ ಓದಲಿ ಅದು ಅವರದೇ, ಅವರ ಬೀದಿಯದೇ, ಊರಿನದೇ ಸಂಗತಿಯಾಗಿಬಿಡುವಷ್ಟು ಸಾರ್ವತ್ರಿಕ ಗುಣವನ್ನೂ ಪಡೆದುಬಿಡುತ್ತದೆ. ನಿರ್ದಿಷ್ಟ ಪ್ರದೇಶವೊಂದರಲ್ಲಿ ಕೆಲವೇ ಲಕ್ಷ ಮಂದಿ ಆಡುತ್ತಿದ್ದ ಯಿದ್ದಿಷ್ ಭಾಷೆಯಲ್ಲಿ ಲೋಕವೇ ಮೆಚ್ಚುವ ಕಥೆಗಳನ್ನು ಬರೆದ ನೊಬೆಲ್ ಪ್ರಶಸ್ತಿ ವಿಜೇತ ಲೇಖಕ ಸಿಂಗರ್ ಪೋಲೆಂಡಿನಿಂದ ಅಮೆರಿಕಕ್ಕೆ ವಲಸೆ ಬಂದು ನ್ಯೂಯಾರ್ಕ್‌ನಲ್ಲಿ ನೆಲೆಸಿ ಪತ್ರಕರ್ತನಾಗಿ ಜೀವನ ನಡೆಸಿದ. ಜಗತ್ಪ್ರಸಿದ್ಧ ಲೇಖಕ ಐಸಾಕ್ ಬಾಸೆವಿಷ್ ಸಿಂಗರ್ ಅಮೆರಿಕೆಯಲ್ಲಿ ಕುಳಿತು ತನ್ನ ನೆಲದ ಬದುಕನ್ನು ಅಲ್ಲಿಯ ಜನಪದ ಕ್ರಮದಲ್ಲೇ ನಿರ್ವಹಿಸುತ್ತಾನೆ. ಹಾಗೆ ಕಥೆಗಳನ್ನು ನಿರೂಪಿಸುವಲ್ಲಿ ಅವನಿಗೆ ಅಮೆರಿಕದ ಬಂಡವಾಳಶಾಹಿ ಬದುಕನ್ನು ಕುರಿತು ನಂಬಿಕೆ ಇದ್ದಿತೇ ಅಂದರೆ ಹೌದು ಅನ್ನುವುದು ಕಷ್ಟ. ಅದಕ್ಕೊಂದು ದಾಖಲೆಯ ಕಥೆಯಾಗಿ 'ಸನ್ ಫ್ರಮ್ ಅಮೆರಿಕ' ಕಥೆಯನ್ನು ನೋಡಬಹುದು. ಕಥೆಯ ಆರಂಭವೇ ಅಮೆರಿಕದ ನಾಗರಿಕ ಬದುಕಿನ ಅಥವಾ ಶ್ರೀಮಂತಿಕೆಯ ವಿವರಗಳಿಂದ ತೊಡಗದೆ ಒಂದು ಸಣ್ಣ ಹಳ್ಳಿಯ ನಕ್ಷೆಯಿಂದ ಆರಂಭವಾಗುತ್ತದೆ.

'ಲೆನ್ಟ್ಶಿನ್ ಹಳ್ಳಿ ಪುಟ್ಟದು. ಇದ್ದವೆಲ್ಲ ಹುಲ್ಲು ಹೊದಿಸಿದ ಗುಡಿಸಲುಗಳು. ಗುಡಿಸಲುಗಳ ಮಧ್ಯೆ ಖಾಲಿ ಜಮೀನು, ಅಲ್ಲಿಯ ಮನೆಯವರು ತರಕಾರಿ ಬೆಳೆಯುತ್ತಲೋ ಕುರಿ ಮೇಕೆ ಮೇಯಿಸಿಕೊಂಡೋ ಇರುತ್ತಿದ್ದರು. ಇಂಥ ಗುಡಿಸಲುಗಳಲ್ಲೂ ಅತಿ ಪುಟ್ಟದಾಗಿದ್ದ ಗುಡಿಸಲಲ್ಲಿ ಎಂಬತ್ತು ದಾಟಿದ್ದ ಮುದುಕ ಬೆರ್ಲ್ ಅವನ ಹೆಂಡತಿ ಬೆರ್ಲ್‌ಚಾ ಇದ್ದರು. ಮುದುಕ ಬೆರ್ಲ್